ಗೋಪಾಲದಾಸರು ತಮ್ಮ ಮೂವರು ತಮ್ಮಂದಿರಿಗೂ ದಾಸದೀಕ್ಷೆ ಇತ್ತರು. ವಿಜಯ ದಾಸರ ಮೋಹದ ಪುತ್ರರಾದ ಮೋಹನದಾಸರು "ಕೋಲುಹಾಡು" ಎಂಬ ಕೃತಿಯನ್ನು ರಚಿಸಿದರು.



೮. **ಜಗನ್ನಾಥ ದಾಸರು :** ನಾಲ್ಕು ವೇದಗಳಲ್ಲಿಯೂ ಪಂಡಿತರಾದ ಶ್ರೀನಿವಾಸಾ ಚಾರ್ಯರು ವಿದ್ಯಾಮದದಿಂದ ಬೀಗುತ್ತ ಗುರುದ್ರೋಹದ ಅಪರಾಧಗೈದು ಮಾರಣಾಂತಿಕ ಖಾಯಿಲೆ ಅನುಭವಿಸುತ್ತಿದ್ದರು. ವಿಜಯದಾಸರನ್ನು ಮೊರೆಹೋಗುವಂತೆ ಮಂತ್ರಾಲಯ ಪ್ರಭುಗಳಾದ ರಾಘವೇಂದ್ರ ಸ್ವಾಮಿಗಳಿಂದ ಅವರಿಗೆ ಸ್ವಪ್ನಾದೇಶವಾಯಿತು. ಪಶ್ಚಾತ್ತಾಪಪಟ್ಟು ಗೋಪಾಲದಾಸರ ಬಳಿಗೆ ಬಂದರು. ೪೦ ವರ್ಷಗಳ ಆಯಸ್ಸನ್ನು ಅವರಿಂದ ಪಡೆದು ಪಂಡರಾಪುರದ ಪಾಂಡುರಂಗನಿಂದಲೇ ಚಂದ್ರಭಾಗಾನದಿಯಲ್ಲಿ "ಜಗನ್ನಾಥವಿಠಲ" ಎಂಬ ಅಂಕಿತವನ್ನು ಪಡೆದರು. ಇವರು 'ಶ್ರೀ ಹರಿಕಥಾಮೃತಸಾರ' ಎಂಬ ಮೇರುಕೃತಿಯನ್ನು ದಾಸಸಾಹಿತ್ಯಕ್ಕೆ ಪ್ರದಾನ ಮಾಡಿದ್ದಾರೆ. ಶ್ರೀ ಜಗನ್ನಾಥದಾಸರ ಪ್ರಮುಖ ಶಿಷ್ಯರೆಂದರೆ ಲಿಂಗಸಗೂರು ಪ್ರಾಣೇಶದಾಸರು, ಕರ್ಜಗಿ ಶ್ರೀದ ವಿಠಲದಾಸರು, ಅಭಿನವ ಜನಾರ್ದನದಾಸರು ಮುಂತಾದವರು. ಇವರೆಲ್ಲರೂ ತಮ್ಮ ಅನನ್ಯ ಕೃತಿಗಳಿಂದ ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಇವರ ಶಿಷ್ಯ ಪ್ರಶಿಷ್ಯ ವರ್ಗದವರೂ ಸಹ ಸಾರಸ್ವತಲೋಕಕ್ಕೆ ವಿಶೇಷ ಕಾಣಿಕೆಯನ್ನಿತ್ತಿದ್ದಾರೆ.

೮. **ಮುದ್ದುಮೋಹನ ವಿಠಲದಾಸರು:** ಶ್ರೀವಿಜಯದಾಸರ ಪೀಳಿಗೆಯಲ್ಲಿ ಬಂದ ಮುದ್ದುಮೋಹನದಾಸರ ಅಂಕಿತ 'ತಂದೆ ಮುದ್ದು ಮೋಹನವಿಠಲ.' ಇಪ್ಪತ್ತನೆಯ ಶತಮಾನದಲ್ಲಿ ನಾಲ್ಕು ದಶಕಗಳಷ್ಟು ಕಾಲ ದಾಸಕೂಟದ 'ಮಹಾವೃಕ್ಷ'ವನ್ನು ಕಾಪಾಡಿಕೊಂಡು ಬಂದ ಮಹಾಮಹಿಮರು ಇವರು. ಅಧುನಿಕ ಯುಗದಲ್ಲಿಯೂ ಈ ಪರಂಪರೆಯನ್ನು ಉಳಿಸಿ ಅನೇಕ ಭಕ್ತಜನರಿಗೆ ಅಂಕಿತಪ್ರದಾನ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇವರಲ್ಲಿ 'ಉರಗಾದ್ರಿವಾಸ ವಿಠಲ' ಮತ್ತು 'ತಂದೆ ವೆಂಕಟೇಶ ವಿಠಲದಾಸರು' ಪ್ರಮುಖರು.

೯. **ಗುರುಗೋವಿಂದ ವಿಠಲದಾಸರು :** ಇವರು ಮುದ್ದುಮೋಹನ ವಿಠಲದಾಸರ ಕೊನೆಯ ಶಿಷ್ಯರು. ಪರಮಗುರುಗಳಿಂದ ಹಿಡಿದು ವೇಣುಗೋಪಾಲ ದಾಸರವರೆಗೆ ತಮ್ಮ ಪೀಳಿಗೆಯ ಚರಿತ್ರೆಯನ್ನು ರಚಿಸಿದರು. ಮಧ್ವಾಚಾರ್ಯರು ರಚಿಸಿದ ದಶೋಪನಿಷತ್ತುಗಳ ಭಾಷ್ಯದ ತಿರುಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸಿದರು. "ಶ್ರೀ ಗುರುಕೃಪಾ ಗ್ರಂಥಮಾಲೆ" ಯನ್ನು ಸ್ಥಾಪಿಸಿ ಅನೇಕ ಸದ್ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇವರು 'ಶ್ರೀಹರಿದಾಸ ಕುಲತಿಲಕ' ಎಂಬ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಅಲ್ಲದೆ, ೨೬೫ ಜನರಿಗೆ ಅಂಕಿತಪ್ರದಾನ ಮಾಡಿದ್ದಾರೆ. ಅವರ ಪ್ರಮುಖ ಶಿಷ್ಯರಾದ ಜಾಂಬವತಿ ವಿಠಲರು ೧೯೯೬ ರಲ್ಲಿ 'ಹರಿದಾಸ ಸಾಹಿತ್ಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರ' ವನ್ನು ಸ್ಥಾಪಿಸಿದ್ದಾರೆ. ಆಮೂಲಕ ಸಾವಿರಾರು ವಿದ್ಯಾರ್ಥಿಗಳಿಗೆ ಉಚಿತ 'ಹರಿದಾಸ ಶಿಕ್ಷಣ' ಪರೀಕ್ಷೆಗಳನ್ನು ನಡೆಸಿ, ಪ್ರಶಸ್ತಿಪ್ರದಾನವನ್ನು ಮಾಡುತ್ತಿದ್ದಾರೆ.

ಕೇವಲ ಹರಿದಾಸರಲ್ಲದೆ, ಮಹಿಳಾ ಹರಿದಾಸಿಯರೂ ಕೂಡ ಸಾರಸ್ವತಲೋಕಕ್ಕೆ ಉಜ್ವಲವಾದ ಕೊಡುಗೆಯನ್ನು ಇತ್ತಿದ್ದಾರೆ. ೧೭ನೇ ಶತಮಾನದ ಗಲಗಲಿ ಅವ್ವ, ೧೮ನೇ ಶತಮಾನದ ಹೆಳವನಕಟ್ಟೆ ಗಿರಿಯಮ್ಮ, ಹರಪನಹಳ್ಳಿ ಭೀಮವ್ವ, ಓರ್ವಾಯಿ ಲಕ್ಷ್ಮಿಬಾಯಿ, ೧೯ ಮತ್ತು ೨೦ನೇ ಶತಮಾನದಲ್ಲಿ ಅಂಬಾಬಾಯಿ, ನರಸಾಬಾಯಿ, ಜೀವೂಬಾಯಿ ಮುಂತಾದವರು ಇವರಲ್ಲಿ ಪ್ರಮುಖರು. ೨೦ ಮತ್ತು ೨೧ನೇ ಶತಮಾನದ ಹರಿದಾಸಿಯರಾದ ಟಿ.ಎನ್. ನಾಗರತ್ನ, ಎನ್.ಜಿ. ವಿಜಯಲಕ್ಷ್ಮಿ, ಶ್ರೀ ರುಕ್ಮಿಣಿ ಗಿರಿಮಾಜಿ – ಇವರೆಲ್ಲರೂ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಹೀಗೆ ಹರಿದಾಸ ಸಾಹಿತ್ಯವು ಗಂಗಾಪ್ರವಾಹದಂತೆ ಹರಿಯುತ್ತಲೇ ಇದೆ.


**ಆಧ್ಯಾತ್ಮಿಕ ಶಿಬಿರ (ಪುರುಷರಿಗಾಗಿ ಆವಾಸಿ ಕ್ಯಾಂಪ್)**

**2014 ಜುಲೈ 2 ರಿಂದ 6 ರವರೆಗೆ ; ಮಾಧ್ಯಮ: ಕನ್ನಡ ಮತ್ತು ಇಂಗ್ಲೀಷ್**

**ಊಟ ಹಾಗೂ ವಿಶೇಷ ವಸತಿ ಸೌಲಭ್ಯಗಳಿರುವ ಐದು ದಿನಗಳ ಶಿಬಿರಕ್ಕಾಗಿ: ರೂ. 2,000/– ಮಾತ್ರ**

* ಶಿಬಿರದ ಎಲ್ಲ ಐದು ದಿನಗಳು ಕಾರ್ಯಕ್ರಮಗಳಲ್ಲಿ ಪೂರ್ಣವಾಗಿ ಭಾಗವಹಿಸುವವರು ಮಾತ್ರ ಅರ್ಜಿಫಾರಂ ಭರ್ತಿ ಮಾಡಬೇಕು. * 145 ಶಿಬಿರಾರ್ಥಿಗಳು ಮಾತ್ರ ಭಾಗವಹಿಸಲು ಅವಕಾಶವಿರುವುದರಿಂದ ಮೊದಲು ಸ್ವೀಕರಿಸಿದ ಅರ್ಜಿಗಳಿಗೆ ಆದ್ಯತೆ ಇರುತ್ತದೆ. * ಒಂದು ವೇಳೆ ಆಯ್ಕೆಗೊಂಡ ಶಿಬಿರಾರ್ಥಿಗಳು ಬರದೆ ಇದ್ದಲ್ಲಿ ಅವರ ಪ್ರತಿನಿಧಿಯಾಗಿ ಬೇರೆ ಯಾರಿಗೂ ಅವಕಾಶವಿರುವುದಿಲ್ಲ. * ಒಂದು ವೇಳೆ ಶಿಬಿರಾರ್ಥಿಗಳು ಶಿಬಿರಕ್ಕೆ ಬರದೆ ಇದ್ದಲ್ಲಿ ರೂ.1500/– ಮಾತ್ರ ಹಿಂತಿರುಗಿಸಲಾಗುವುದು. * ಶಿಬಿರದ ವಿವರಗಳನ್ನೊಳಗೊಂಡ ಪ್ರಾಸ್ಪೆಕ್ಟಸ್ ಮತ್ತು ಅರ್ಜಿಫಾರಂಗಾಗಿ ನಿಮ್ಮ ವಿಳಾಸವಿರುವ (10cm x 23cm) ಲಕೋಟೆಗೆ ರೂ.5/– ಅಂಚೆ ಸ್ಟ್ಯಾಂಪ್ ಲಗತ್ತಿಸಿ ಕರೆಸ್ಪಾಂಡೆಂಟರ ಹೆಸರಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ. **ತುಂಬಿದ ಅರ್ಜಿಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ : ಜೂನ್ 10, 2014.**

ವಿಳಾಸ : **Ramakrishna Institute of Moral and Spiritual Education, Yadavagiri, Mysore-570020**
**Phone:0821-2417666 ; E-mail: mysore.rimse@gmail.com.**



# ಸ್ನೇಹಿತರೆ, ಭ್ರಷ್ಟಾಚಾರವನ್ನು ಕೊನೆಗಾಣಿಸೋಣ ಬನ್ನಿ !

**ಟಿಪ್ಪುಸುಲ್ತಾನ ಜೆ. ನಾಯ್ಕವಾಡಿ**
**ಅಧ್ಯಕ್ಷರು, ವಿವೇಕಾನಂದ ಯುವ ಸ್ವಯಂಸೇವಾ ಸಂಘ, ಹಾನಗಲ್**

ಎಲ್ಲಿಗೆ ಬಂತು, ಯಾರಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ? ಭ್ರಷ್ಟ ರಾಜಕಾರಣಿಗಳ ಜೇಬಿಗೆ ಬಂತು, ಲಂಚಬಾಕರ ಹಣದ ದಾಹಕ್ಕೆ ಬಂತು ನಲವತ್ತೇಳರ ಸ್ವಾತಂತ್ರ್ಯ! ಭಾರತ ಸ್ವಾತಂತ್ರ್ಯ ಪಡೆದು ೬೫ ವರ್ಷಗಳು ಸಂದಿವೆ. ಹೀಗಿರುವಾಗ ಭಾರತದ ಸಾಧನೆ ಏನು ಎಂಬುದನ್ನು ಅವಲೋಕಿಸಿದಾಗ ಕೇವಲ ಭ್ರಷ್ಟಾಚಾರ, ಭಯೋತ್ಪಾದನೆಯಂತಹ ಪೆಡಂಭೂತಗಳು ನಮ್ಮ ಕಣ್ಣಿಗೆ ರಾಚುತ್ತವೆ. ಜಾಗತಿಕವಾಗಿ ತಲೆಯೆತ್ತುತ್ತಿರುವಾಗಲೇ ಭಾರತ ಇಂತಹ ದುಷ್ಟಶಕ್ತಿಗಳ ವ್ಯೂಹಕ್ಕೆ ಸಿಲುಕಿ ಒದ್ದಾಡುತ್ತಿರುವುದು ತುಂಬಾ ಶೋಚನೀಯ. ಭಾರತದ ಸದ್ಯದ ಪರಿಸ್ಥಿತಿಯನ್ನು ಸ್ಪಷ್ಟವಾಗಿ ನೋಡಿದಾಗ ಇಂದು ಭ್ರಷ್ಟಾಚಾರವು ಭಯೋತ್ಪಾದನೆಗಿಂತಲೂ ದೊಡ್ಡ ತಲೆನೋವಾಗಿ ಸಂಭವಿಸಿದೆಯೇನೋ ಎನಿಸುತ್ತದೆ.

ಭ್ರಷ್ಟಾಚಾರದ ಈ ಗೆದ್ದಿಲುಹುಳು ಭಾರತದ ಎಲ್ಲಾ ಕ್ಷೇತ್ರಗಳನ್ನೂ ಪ್ರವೇಶಿಸಿ, ಭಾರತೀಯರ ನೈತಿಕತೆಯನ್ನು ನಾಶಮಾಡಿ ಇಡೀ ವ್ಯವಸ್ಥೆಯನ್ನೇ ಪೊಳ್ಳುಮಾಡಿದೆ. ಭಯೋತ್ಪಾದಕರ ದಾಳಿಯಾದರೆ ಅದನ್ನು ಮಿಲಿಟರಿ ಪಡೆಯಿಂದ ತಡೆಗಟ್ಟಬಹುದು. ಆದರೆ ಭ್ರಷ್ಟಾಚಾರದ ಇಂತಹ ಭಯಾನಕ ದಾಳಿಯನ್ನು ತಡೆಗಟ್ಟಲು ಯಾವ ಪಡೆಯಿದೆ? ಲೋಕಾಯುಕ್ತ ಸಂಸ್ಥೆ ಇದೆ ನಿಜ. ಆದರೆ ಲೋಕಾಯುಕ್ತ ಸಂಸ್ಥೆಯೊಂದೇ ಎಷ್ಟು ತಾನೇ ಭ್ರಷ್ಟಾಚಾರವನ್ನು ತಡೆಗಟ್ಟಬಹುದು? ಭಯೋತ್ಪಾದಕರು ದಾಳಿ ಮಾಡಬೇಕಾದರೆ ನಿರ್ದಿಷ್ಟ ಗುರಿಯೊಂದನ್ನು ಇಟ್ಟುಕೊಂಡು ನಿರ್ದಿಷ್ಟ ಪ್ರದೇಶದ ಮೇಲೆ ದಾಳಿ ಮಾಡುತ್ತಾರೆ. ಆದರೆ ಭ್ರಷ್ಟಾ ಚಾರದ ವಿರಾಟ್ ಸ್ವರೂಪವೇ ಬೇರೆ. ಇದಕ್ಕೆ ನಿರ್ದಿಷ್ಟ ಗುರಿ, ನಿರ್ದಿಷ್ಟ ಸ್ಥಳವೆಂಬ ಪರಿಕಲ್ಪನೆಯೇನೂ ಇಲ್ಲ. ಇಡೀ ವ್ಯವಸ್ಥೆಯೇ ಇದರ ಗುರಿ. ಹೀಗೆ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರವೆಂಬ ಹೆಮ್ಮರದ ಬೇರುಗಳನ್ನು ನಿರ್ಮೂಲನ ಮಾಡುವುದಾದರೂ ಹೇಗೆ ಎಂಬುದೇ ನಮ್ಮ ಮುಂದಿರುವ ಯಕ್ಷಪ್ರಶ್ನೆ. ಈ ಕಾರಣದಿಂದಾಗಿಯೇ ಇಂದು ಭ್ರಷ್ಟಾಚಾರ ಹೆಮ್ಮರವಾಗಿ ಬೆಳೆದು ನಮ್ಮನ್ನೇ ತುಳಿಯುವಷ್ಟರಮಟ್ಟಿಗೆ ತಲುಪಿದೆ.

ಭ್ರಷ್ಟಾಚಾರದ ಕಬಂಧ ಬಾಹುಗಳು ಎಷ್ಟು ವ್ಯಾಪಕವಾಗಿ ಚಾಚಿಕೊಂಡಿವೆ ಎಂದರೆ ಇಂದು ಹಲವಾರು ವೃತ್ತಿಗಳಲ್ಲಿ, ಉದ್ಯಮಗಳಲ್ಲಿ ತೊಡಗಿರುವ ಎಲ್ಲರನ್ನೂ ನಾವಿಂದು ಅನುಮಾನದಿಂದಲೇ ನೋಡುವಂತಹ ಪರಿಸ್ಥಿತಿ ಬಂದೊದಗಿದೆ. ಹಿಂದೊಮ್ಮೆ ಭ್ರಷ್ಟಾಚಾರದಿಂದ ಬಹಳಷ್ಟುಮಟ್ಟಿಗೆ ದೂರ ವಿದ್ದ ಹಲವಾರು ಕ್ಷೇತ್ರಗಳೂ ಕೂಡ ಇಂದು ಅದರ ತೆಕ್ಕೆಯೊಳಗೆ ಸೇರಿಕೊಳ್ಳತೊಡಗಿವೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಭ್ರಷ್ಟಾಚಾರ ನಿರ್ಮೂಲನವೇ ಅಸಾಧ್ಯವೆಂಬ ನಕಾರಾತ್ಮಕ ಮನೋಭಾವನೆ ಎಲ್ಲ ವಲಯಗಳಲ್ಲಿ ಮೂಡಿರುವುದು ಅಸಹ್ಯಕರ. 'ಭ್ರಷ್ಟಾಚಾರ ನಿರ್ಮೂಲನೆ ಸಾಧ್ಯವಿಲ್ಲ' ಎಂದು ಅದನ್ನೊಂದು ಶಾಶ್ವತ ಸಮಸ್ಯೆ ಮಾಡಿಕೊಂಡು, ಪರೋಕ್ಷವಾಗಿ ಅದರ ಬೆಂಬಲಕ್ಕೆ ನಿಂತಿರುವ ರಣಹೇಡಿಗಳನ್ನು ಈಗಲಾದರೂ ಎಚ್ಚರಿಸಬೇಕಾದ ಅಗತ್ಯವಿದೆ. ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಕರ್ತೃತ್ವ ಶಕ್ತಿ ಮಾನವನಲ್ಲಿದೆ. ಯಾವುದೇ ಒಂದು ಕಾರ್ಯಸಾಧನೆಗೂ ಮುಂಚೆ ನಾವು ಅದರ ಬಗ್ಗೆ ಹೊಂದಿರುವ ಮನೋಭಾವ ಮುಖ್ಯ.

“ಯಾವುದೇ ವಾಸ್ತವತೆಗಿಂತ, ನಾವು ಅದರ ಬಗ್ಗೆ ಹೊಂದಿರುವ ಮನೋಭಾವ ಮುಖ್ಯವಾಗಿದೆ. ಏಕೆಂದರೆ ಅದೇ ನಮ್ಮ ಸಫಲತೆ ಅಥವಾ ವಿಫಲತೆಯನ್ನು ನಿರ್ಣಯಿಸುತ್ತದೆ” ನಾರ್ಮನ್ ವಿನ್ಸೆಂಟ್ ಪೀಲೆ ಹೇಳಿರುವ ಈ ಅದ್ಭುತವಾದ ಸಾಲುಗಳು ಭ್ರಷ್ಟಾಚಾರದ ಬಗ್ಗೆ ನಿರ್ಲಕ್ಷ್ಯ ತಾಳಿರುವ ದುಷ್ಟರ ಮನಸ್ಸನ್ನು ನಿದ್ರಾವಸ್ಥೆಯಿಂದ ಹೊರತರಬೇಕಾಗಿದೆ ಎಂಬುದನ್ನು ಸೂಚಿಸುತ್ತದೆ. ಕಬ್ಬಿನ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯನ್ನು ಹೊಂದಿರುವ ಬಿಸಿರಕ್ತದ ತರುಣ ಪಡೆ ದೇಶದ ಅರ್ಧದಷ್ಟಿರುವಾಗ ಈ ಪೆಡಂಭೂತವನ್ನು ನಾಶ ಮಾಡಲಾಗುತ್ತಿಲ್ಲವೇಕೆ ಎಂಬ ಪ್ರಶ್ನೆಗಳು ನಮ್ಮನ್ನು ಕಾಡುತ್ತಿವೆಯೇ ಹೊರತು ಅವು ನಮ್ಮನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಲು ಬಿಡುತ್ತಿಲ್ಲ. ಹಲವಾರು ಅಭೂತಪೂರ್ವ ಹಗರಣಗಳು ದೇಶವನ್ನು ಕಾಡುತ್ತಿರುವಾಗ ಜನರು ತಾಳ್ಮೆಗೆಡುತ್ತಿದ್ದಾರೆ. “ಚುನಾವಣೆಗಳೇ ನಮ್ಮ ದೇಶದ ಉದ್ದಗಲಕ್ಕೂ ಇಂಚು-ಇಂಚನ್ನು ಬಿಡದೇ ಸರ್ವ ವ್ಯಾಪಕವಾಗಿ ಹರಡಿರುವ ಭ್ರಷ್ಟಾಚಾರದ ದೊಡ್ಡ ಬೇರುಗಳು” ಎಂದು ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ. ಖುರೇಷಿಯವರು